**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಕ್ರಿಮಿನಲ್.ಮಿಸ್. 20/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಶೃತಿ** | |
| ಗಂಡನ ಹೆಸರು | | ಸ್ವಾಮಿ | |
| ವಯಸ್ಸು | | 23 ವರ್ಷ | |
| ಕೆಲಸ | | ಗೃಹಿಣಿ | ಸಾ ಪ್ರ ಬೋ |
| ವಾಸ | | ಕುಡ್ಲಾಪುರ (ತವರು ಮನೆ) | ದಿಃ 17/02/2024 |

**ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ**

ಎದುರುದಾರ ನನ್ನ ಗಂಡ. ನಮ್ಮಿಬ್ಬರ ವಿವಾಹವು ದಿಃ 19.05.2011 ರಂದು ಎದುರುದಾರರ ಮನೆಯಾದ ಗೋಳೂರಿನಲ್ಲಿ ನೆರವೇರಿರುತ್ತದೆ. ಮದುವೆಯಾದ ನಂತರ ನಾನು ಮತ್ತು ಎದುರುದಾರರು 2 ವರ್ಷಗಳ ಕಾಲ ಅನ್ಯೋನ್ಯವಾಗಿ ದಾಂಪತ್ಯ ಜೀವನ ನಡೆಸಿರುತ್ತೇವೆ. ನಂತರ ಎದುರುದಾರರು ಮಧ್ಯಪಾನ ಮಾಡಿಕೊಂಡು ಬಂದು ತವರು ಮನೆಯಿಂದ ಹಣ ಮತ್ತು ಚಿನ್ನ ತೆಗೆದುಕೊಂಡು ಬರುವಂತೆ ಹೊಡೆ ಬಡೆ ಮಾಡುವುದು ಮತ್ತು ಬೈಯುವುದು ಮಾಡುತ್ತಿದ್ದರು. ನಾನು ಎದುರುದಾರರ ಮನೆಯಲ್ಲಿ ಇದ್ದಾಗ ನನ್ನ ಊಟ ಬಟ್ಟೆಗೆ ಸರಿಯಾದ ವ್ಯವಸ್ಥೆ ಮಾಡಿರಲಿಲ್ಲ. ಈ ಬಗ್ಗೆ ನಾನು ನನ್ನ ಗಂಡ ಮತ್ತು ಅತ್ತೆ ಮಾವನ ವಿರುದ್ಧ ವರದಕ್ಷಿಣೆ ಕಿರುಕುಳಕ್ಕಾಗಿ ಮೈಸೂರಿನ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ.

2. ನನ್ನ ಮದುವೆಯಾದ 7-8 ವರ್ಷಗಳ ವರೆಗೆ ನನಗೆ ಮಕ್ಕಳಾಗದಿದ್ದ ಕಾರಣ ನನಗೆ ಬಂಜೆ ಎಂದು ಬೈಯುತ್ತಿದ್ದರು. ಮದುವೆಯಾದ 8 ವರ್ಷಗಳ ನಂತರ ನಾನು ಗರ್ಭಿಣಿಯಾದಾಗ ನನಗೆ ಗರ್ಭಪಾತ ಮಾಡಿಸಿಕೊಳ್ಳುವಂತೆ ಎದುರುದಾರರು ನನಗೆ ಹಿಂಸೆ ಮಾಡುತ್ತಿದ್ದರು. ನನ್ನ ಗಂಡ ಕೃಷಿ ಮತ್ತು ಗಾರೆ ಕೆಲಸದಿಂದ ತಿಂಗಳಿಗೆ 20-30 ಸಾವಿರ ದುಡಿಯುತ್ತಾರೆ. 2 ನೇ ಎದುರುದಾರ ನನ್ನ ಮಗ. ಎದುರುದಾರರು

ವಿವಾಹ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದಾರೆ. ನನ್ನ ಮತ್ತು ನನ್ನ ಮಗನ ಜೀವನಾಂಶಕ್ಕೆ ಮಾಸಿಕ 10-15 ಸಾವಿರ ರೂಪಾಯಿ ಬೇಕಾಗುತ್ತದೆ. ಎದುರುದಾರ ಮತ್ತು ನನ್ನ ಅತ್ತೆಮಾವನ ವಿರುದ್ಧ ದಾಖಲಾಗಿರುವ ಪ್ರ.ವ.ವರದಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ನೀಡಲಾಯಿತು.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**